**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**
**ಸಿ.ಸಿ. ಸಂಖ್ಯೆ. 376/2021**

ಸಾಕ್ಷಿದಾರರ ಹೆಸರು : ರವಿ. ಕೆ ಡಿ.ಡಬ್ಲ್ಯೂ:1
ತಂದೆಯ ಹೆಸರು : ಕಬ್ಬು
ವಯಸ್ಸು : 38 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ ಸ್ಥಳ : ಬಣಕಲ್

ದಿನಾಂಕಃ 20.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಶ್ರೀ ಹೆಚ್.ಆರ್.ಸಿ. ವಕೀಲರಿಂದ ಆರೋಪಿಯ ಪರವಾಗಿಃ**

1. ಈ ಪ್ರಕರಣದಲ್ಲಿ ಹಾಜರು ಮಾಡಿರುವ ಚೆಕ್ಕನ್ನು ನಾನು ಈ ಪ್ರಕರಣದ ದೂರುದಾರರಾದ ರಂಗನಾಥ ರವರಿಗೆ ನೀಡಿರುವುದಿಲ್ಲ. ನಾನು ಎನ್.ಟಿ. ಮೋಹನ್ ರವರ ಬೈರೇಶ್ವರ ಎಸ್ಟೇಟಿಗೆ 15 ಜನ ಕೂಲಿ ಆಳುಗಳನ್ನು ಸರಬರಾಜು ಮಾಡಿರುತ್ತೇನೆ. ಕೂಲಿ ಆಳುಗಳು ಮುಂಗಡ ಹಣ ಪಾವತಿ ಮಾಡುವಂತೆ ನನ್ನ ಬಳಿ ಕೇಳಿರುತ್ತಾರೆ. ಎನ್.ಟಿ. ಮೋಹನ್ ರವರು ಕೂಲಿ ಆಳುಗಳನ್ನು ಸರಬರಾಜು ಮಾಡಿದ ಬಗ್ಗೆ ಮುಂಗಡ ಹಣವನ್ನು ರೂ.50,000-00 ನ್ನು ನನಗೆ ನೀಡಿರುತ್ತಾರೆ. ನಂತರ ಕೂಲಿ ಆಳುಗಳು ಎನ್.ಟಿ. ಮೋಹನ್ ರವರ ತೋಟದಲ್ಲಿ 3 ತಿಂಗಳುಗಳ ಕಾಲ ಕೆಲಸ ಮಾಡಿರುತ್ತಾರೆ. ನಾನು ಎನ್.ಟಿ. ಮೋಹನ್ ರವರಿಂದ ಸಾಲವಾಗಿ ಪಡೆದಿದ್ದ ರೂ.50,000-00 ರೂಪಾಯಿಯು ಕೂಲಿ ಕೆಲಸ ಮಾಡಿಸುವ ಮೂಲಕ ಸಂದಾಯ ಆಗಿರುತ್ತದೆ. ಸದರಿ ರೂ.50,000-00 ನಾನು ಎನ್.ಟಿ. ಮೋಹನ್ ರವರಿಂದ ಪಡೆಯುವ ಸಮಯದಲ್ಲಿ ಭದ್ರತೆಗಾಗಿ ಈ ಪ್ರಕರಣದಲ್ಲಿ ಹಾಜರು ಮಾಡಿರುವ ಚೆಕ್ಕನ್ನು ಎನ್.ಟಿ. ಮೋಹನ್ ರವರು ನನ್ನಿಂದ ಪಡೆದುಕೊಂಡಿದ್ದರು. ಎನ್.ಟಿ. ಮೋಹನ್ ರವರಿಂದ ನನಗೆ ಕೂಲಿ ಆಳುಗಳನ್ನು ಸರಬರಾಜು ಮಾಡಿದ ಬಗ್ಗೆ ರೂ.30,000-00 ಕಮಿಷನ್ ಬರಲು ಬಾಕಿ ಇತ್ತು. ಸದರಿ ಹಣವನ್ನು ನಾನು

ಎನ್.ಟಿ. ಮೋಹನ್ ರವರ ಬಳಿ ಕೇಳಿದಾಗ ಸದರಿರವರು ಕಮಿಷನ್ ಹಣವನ್ನು ನೀಡುತ್ತೇನೆ ಎಂದು ಸತಾಯಿಸುತ್ತಿದ್ದರು. ಎನ್.ಟಿ. ಮೋಹನ್ ರವರ ಬಳಿ ಚೆಕ್ಕನ್ನು ವಾಪಸ್ಸು ನೀಡುವಂತೆ ಕೇಳಿದಾಗ ನೀಡುತ್ತೇನೆ ಎಂದು ಸತಾಯಿಸುತ್ತಿದ್ದರು. ಸದರಿ ಹಣದ ವಿಚಾರವಾಗಿ ನಾನು ವಳಗೆರೆಹಳ್ಳಿ ಚೌಡೇಶ್ವರಿ ದೇವಸ್ಥಾನದಿಂದ ಎನ್.ಟಿ. ಮೋಹನ್ ರವರಿಗೆ ನೋಟೀಸು ಕೋಡಿಸಿರುತ್ತೇನೆ. ಸದರಿ ದೇವಸ್ಥಾನದಲ್ಲಿ ನಾನು ಮತ್ತು ಎನ್.ಟಿ. ಮೋಹನ್ ರವರು ಹಣದ ವಿಚಾರವಾಗಿ ಪ್ರಮಾಣ ಮಾಡಿರುತ್ತೇವೆ. ದೇವಸ್ಥಾನದಲ್ಲಿ ಎನ್.ಟಿ. ಮೋಹನ್ ರವರು ನನಗೆ ನೀಡಬೇಕಾಗಿದ್ದ ರೂ.30,000-00 ನ್ನು ನೀಡುತ್ತೇನೆ ಎಂದು ಒಪ್ಪಿಕೊಂಡಿರುತ್ತಾರೆ. ನಂತರ ಮನೆಗೆ ಬಂದ ನಂತರ ಹಣವನ್ನು ವಾಪಸ್ಸು ನೀಡಿರುವುದಿಲ್ಲ. ನಂತರ ನಾನು ಅನೇಕ ಬಾರಿ ಎನ್.ಟಿ. ಮೋಹನ್ ರವರ ಬಳಿ ಸದರಿ ಹಣವನ್ನು ನೀಡುವಂತೆ ಕೇಳಿದ್ದರು ಸಹ ಎನ್.ಟಿ. ಮೋಹನ್ ರವರು ನನಗೆ ಹಣ ವಾಪಸ್ಸು ನೀಡಿರುವುದಿಲ್ಲ. ನೀನು ಏನು ಬೇಕಾದರು ಮಾಡಿಕೋ ಎಂದು ಹೇಳಿರುತ್ತಾರೆ. ನಿನ್ನನ್ನು ಯಾವ ರೀತಿ ಆಟ ಆಡಿಸಬೇಕು ಎಂದು ನನಗೆ ಗೊತ್ತಿದೆ ನನ್ನ ಬಳಿ ಗ್ರಿಪ್ ಇರುತ್ತದೆ ಎಂದು ಎನ್.ಟಿ. ಮೋಹನ್ ರವರು ನನಗೆ ಹೇಳಿರುತ್ತಾರೆ. ನಂತರ 2018 ರಲ್ಲಿ ನನಗೆ ರಂಗನಾಥ ರವರ ಮೂಲಕ ವಕೀಲರ ನೋಟೀಸು ಬಂದಿರುತ್ತದೆ. ಸದರಿ ನೋಟೀಸಿಗೆ ನಾನು ಉತ್ತರ ನೀಡಿರುತ್ತೇನೆ. ರಂಗನಾಥ ಯಾರು ಎಂದು ನನಗೆ ಗೊತ್ತಿರುವುದಿಲ್ಲ.

<u>ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ – ಆರೋಪಿತನ ಪರವಾಗಿ</u>

2. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿನಾಂಕಃ 01.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ – ದೂರುದಾರರ ಪರವಾಗಿ</u>

3. ನಾನು ದಿಃ 16.10.2017 ರಂದು ದೂರುದಾರರಿಗೆ ಕೂಲಿ ಆಳುಗಳನ್ನು ಸರಭರಾಜು ಮಾಡುತ್ತೇನೆ ಎಂದು ರೂ.2,50,000-00 ಪಡೆದು-ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಪಡೆದುಕೊಂಡ ನಂತರ ನಾನು ದೂರುದಾರರ ತೋಟಕ್ಕೆ ಕೂಲಿ ಆಳುಗಳನ್ನು ಸರಬರಾಜು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರರು ನೀಡಿರುವ ನಿ.ಪಿ.3 ನೋಟೀಸು ನನಗೆ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.5 ಅಂಚೆ ಸ್ವೀಕೃತಿಯಲ್ಲಿ ಇರುವ ಸಹಿ ನನ್ನದೇ ಸಹಿ ಎಂದರೆ ಸರಿಯಲ್ಲ. ನಿ.ಪಿ.5 ರಲ್ಲಿ ಇರುವ ಸಹಿ ನನ್ನದೇ ಸಹಿ ಆಗಿದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ನಮೂದು ಮಾಡಿರುವ ವಿಳಾಸ ನನ್ನದೇ ಇರುತ್ತದೆ. ನಿ.ಪಿ.3 ನೋಟೀಸು ಮತ್ತು ನಿ.ಪಿ.5 ಅಂಚೆ ಸ್ವೀಕೃತಿಯಲ್ಲಿ ಇರುವ ವಿಳಾಸ ನನ್ನದೇ ಇರುತ್ತದೆ. ಈಗ ಸಾಕ್ಷಿಗೆ ವಕಾಲತ್ ನಲ್ಲಿ ಇರುವ ಸಹಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ಸದರಿ ಸಹಿಯು ನನ್ನ ಸಹಿ ಅಲ್ಲ ಎಂದು ತಿಳಿಸಿರುತ್ತಾರೆ. ವಕಾಲತ್ ನ್ನು ನಿ.ಪಿ.7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು 2017 ರಲ್ಲಿ ನನಗೆ ಎನ್.ಟಿ. ಮೋಹನ್ ರವರಿಂದ ನೋಟೀಸು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನನಗೆ ದೂರುದಾರರು ನೀಡಿರುವ ನೋಟೀಸು ಜಾರಿಯಾದ ನಂತರ ನಾನು ಸದರಿ ನೋಟೀಸಿಗೆ ಉತ್ತರ ನೀಡಿರುತ್ತೇನೆ. ನಾನು ದೂರುದಾರರಿಗೆ ನೀಡಿರುವ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನಾನು ದೂರುದಾರರು ನೀಡಿರುವ ನೋಟೀಸಿಗೆ ಯಾವುದೇ ಉತ್ತರವನ್ನು ನೀಡದಿದ್ದರು ಸಹ ಉತ್ತರ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎನ್.ಟಿ. ಮೋಹನ್ ರವರ ವಿರುದ್ದ ಪೊಲೀಸರಿಗೆ ದೂರು ನೀಡಿರುತ್ತೇನೆ. ನಾನು ಎನ್.ಟಿ. ಮೋಹನ್ ರವರ ವಿರುದ್ದ ಯಾವುದೇ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದೂರಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ನಾನು 3 ತಿಂಗಳುಗಳ ಕಾಲ ಕೆಲಸಗಾರರನ್ನು ದೂರುದಾರರ ತೋಟಕ್ಕೆ ಬಿಟ್ಟ ಬಗ್ಗೆ ನನ್ನ ಬಳಿ ದಾಖಲಾತಿ ಇರುತ್ತದೆ. ಸದರಿ ದಾಖ್ಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ರಂಗನಾಥ ರವರು ಯಾರು ಎಂದು ನನಗೆ ಗೊತ್ತಿಲ್ಲ, ನಾನು ಎನ್.ಟಿ. ಮೋಹನ್ ರವರ ತೋಟಕ್ಕೆ ಕೆಲಸಕ್ಕೆ ಜನಗಳನ್ನು ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕೆಲಸಗಾರರನ್ನು ಈ ಪ್ರಕರಣದಲ್ಲಿ ವಿಚಾರಣೆ ಮಾಡಲು ನನಗೆ ಅಭ್ಯಂತರ ಇರುವುದಿಲ್ಲ. ನಾನು ಸದರಿ ಕೆಲಸಗಾರರನ್ನು ಈ ಪ್ರಕರಣದಲ್ಲಿ ವಿಚಾರಣೆ ಮಾಡಿಸಿರುವುದಿಲ್ಲ. ನನಗೆ  ಎನ್.ಟಿ. ಮೋಹನ್ ರವರಿಂದ ರೂ.30,000-00 ಕಮಿಷನ್ ಬರಲು ಬಾಕಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಎನ್.ಟಿ. ಮೋಹನ್ ರವರಿಗೆ ಚೌಡೇಶ್ವರಿ ದೇವಸ್ಥಾನದಿಂದ ನೋಟೀಸು ನೀಡಿದ ಬಗ್ಗೆ ನನ್ನ ಬಳಿ ನೋಟೀಸಿನ ಪ್ರತಿ ಇರುತ್ತದೆ. ಸದರಿ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು  ಎನ್.ಟಿ. ಮೋಹನ್ ರವರು ನನಗೆ ಚೌಡೇಶ್ವರಿ ದೇವಸ್ಥಾನದಿಂದ ನೋಟೀಸು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು  ಎನ್.ಟಿ. ಮೋಹನ್ ರವರಿಗೆ ಚೌಡೇಶ್ವರಿ ದೇವಸ್ಥಾನದಿಂದ ನೋಟೀಸು ನೀಡಿರುತ್ತೇನೆ ಎಂದು ಹೇಳಿರುವುದು ಸುಳ್ಳಾಗಿರುತ್ತದೆ. ನಾನು ರಂಗನಾಥ ರವರಿಗೆದಿಃ 08.03.2024 ರಂದು

ರೂ.80,000-00 ನ್ನು ಕೊಡುತ್ತೇನೆ ಎಂದು ಉಳಿಕೆ ಹಣವನ್ನು ಕಂತಿನಲ್ಲಿ ಪಾವತಿ ಮಾಡುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ತಪ್ಪಿಸಿಕೊಳ್ಳುವ ಉದ್ದೇಶದಿಂದ ದೂರುದಾರರಿಗೆ ಹಣ ಮರು ಪಾವತಿ ಮಾಡುತ್ತೇನೆ ಎಂದು ಒಪ್ಪಿಕೊಂಡಿದ್ದರು ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ಮಧ್ಯಂತರ ಆದೇಶದ ಮೇರೆಗೆ ದಿನಾಂಕಃ 08.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಹೆಚ್.ಆರ್.ಸಿ. ವಕೀಲರಿಂದ ಆರೋಪಿಯ ಪರವಾಗಿಃ**

4. ನಿ.ಪಿ.1 ಚೆಕ್ಕನ್ನು ನಾನು ದಿಃ 03.07.2015 ರಂದು ಎನ್.ಟಿ. ಮೋಹನ್ ರವರಿಗೆ ನೀಡಿರುತ್ತೇನೆ. ನನಗೂ ಮತ್ತು ಎನ್.ಟಿ. ಮೋಹನ್ ರವರ ನಡುವೆ ದಿಃ 03.07.2015 ರಂದು ಕರಾರು ಪತ್ರ ಆಗಿರುತ್ತದೆ. ಸದರಿ ಕರಾರು ಪತ್ರದಲ್ಲಿ ನಾನು ಎನ್.ಟಿ. ಮೋಹನ್ ರವರ ತೋಟಕ್ಕೆ 8 ಜನ ಕೂಲಿ ಆಳುಗಳನ್ನು ಕೆಲಸಕ್ಕೆ ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಒಂದು ಆಳಿಗೆ ದಿನಕ್ಕೆ ರೂ.260-00 ಸಂಬಳ ನಿಗಧಿಯಾಗಿತ್ತು. ಸದರಿ ರೂ.260-00 ಯಲ್ಲಿ ಕೂಲಿ ಆಳುಗಳಿಗೆ ರೂ.220-00 ಮತ್ತು ರೂ.40-00 ಮೇಸ್ತ್ರಿಯಾದ ನನಗೆ ಎಂದು ಕರಾರು ಪತ್ರ ಆಗಿರುತ್ತದೆ. ಎನ್.ಟಿ. ಮೋಹನ್ ರವರು ನನಗೆ ಕೂಲಿ ಆಳುಗಳನ್ನು ಸರಬರಾಜು ಮಾಡಿದ ಬಾಬ್ತು ರೂ.20,000-00 ಪಾವತಿ ಮಾಡಲು ಬಾಕಿ ಇರುತ್ತದೆ. ನಾನು ಸದರಿ ರೂ.20,000-00 ಮರು ಪಾವತಿ ಮಾಡುವಂತೆ ಕೇಳಿರುತ್ತೇನೆ. ಆಗ ಎನ್.ಟಿ. ಮೋಹನ್ ರವರು ರೂ.20,000-00 ನ್ನು ನನಗೆ ನೀಡಿ ಆ ಸಮಯದಲ್ಲಿ ಚೆಕ್ಕು ನೀಡಬೇಕು ಎಂದು ಕೇಳಿರುತ್ತಾರೆ. ಆಗ ನಾನು ಎನ್.ಟಿ. ಮೋಹನ್ ರವರಿಗೆ ಸಹಿ ಮಾಡಿದ ಚೆಕ್ಕು ನೀಡಿರುತ್ತಾರೆ. ನಾನು ಎನ್.ಟಿ. ಮೋಹನ್ ರವರಿಂದ ರೂ.20,000-00 ಹಣ ಪಡೆದ ಕಾರಣಕ್ಕಾಗಿ ಸದರಿ ಚೆಕ್ಕನ್ನು ಎನ್.ಟಿ. ಮೋಹನ್ ರವರು ಪಡೆದಿರುತ್ತಾರೆ. ಸದರಿ ಚೆಕ್ಕು ನಂಬರ್ 900192 ಕರ್ನಾಟಕ ಬ್ಯಾಂಕಿನ ಚೆಕ್ಕು ಆಗಿರುತ್ತದೆ. ನಂತರ ನನ್ನ ಬಳಿ ಎನ್.ಟಿ. ಮೋಹನ್ ರವರು ರೂ.20,000-00 ವಾಪಸ್ಸು ನೀಡುವಂತೆ ಕೇಳಿರುತ್ತಾರೆ ಆಗ ನಾನು ನೀವು ನನಗೆ ನೀಡಬೇಕಾದ ರೂ.49,000-00 ದಲ್ಲಿ ಸದರಿ ರೂ.20,000-00 ನ್ನು ಕಳೆದು ಕೊಡುವಂತೆ ಹೇಳಿರುತ್ತೇನೆ. ಎನ್.ಟಿ. ಮೋಹನ್ ರವರ ಬಳಿ ನಾನು ಚೆಕ್ಕು ನೀಡುವಂತೆ

ಅನೇಕ ಬಾರಿ ಕೇಳಿದರು ಸಹ ಚೆಕ್ಕು ವಾಪಸ್ಸು ನೀಡಿರುವುದಿಲ್ಲ. ನಂತರ ನನಗೆ ಎನ್.ಟಿ. ಮೋಹನ್ ರವರು ವಳಗೇರಹಳ್ಳಿ ಭೂತನಾಥೇಶ್ವರಸ್ವಾಮಿ ದೇವಸ್ಥಾನದಿಂದ ನನಗೆ ನೋಟೀಸು ನೀಡಿರುತ್ತಾರೆ. ದೇವಸ್ಥಾನದಲ್ಲಿ ನಾನು ಮತ್ತು ಎನ್.ಟಿ. ಮೋಹನ್ ರವರು ಪ್ರಮಾಣ ಮಾಡಿರುತ್ತೇವೆ. ದೇವಸ್ಥಾನದಲ್ಲಿ ಎನ್.ಟಿ. ಮೋಹನ್ ರವರು ನನಗೆ ಕೊಡಬೇಕಾಗಿದ್ದ ರೂ.29,000-00 ನ್ನು ನೀಡುತ್ತೇನೆ ಎಂದು ಒಪ್ಪಿಕೊಂಡಿರುತ್ತಾರೆ. ಆದರೆ ನನಗೆ ಎನ್.ಟಿ.ಮೋಹನ್ ರವರು ಸದರಿ ರೂ.29,000-00 ವನ್ನು ಮರುಪಾವತಿ ಮಾಡಿರುವುದಿಲ್ಲ. ಈ ಪ್ರಕರಣದ ರಂಗನಾಥ್ ಯಾರು ಎಂದು ನನಗೆ ಪರಿಚಯ ಇರುವುದಿಲ್ಲ. ನನಗೆ ತೋರಿಸಿದ ದಾಖಲೆಯು ಎನ್.ಟಿ. ಮೋಹನ್ ರವರು ಛಾಪಾ ಕಾಗದಲ್ಲಿ ನನಗೆ ಮಾಡಿಕೊಟ್ಟಿರುವ ಕರಾರು ಪತ್ರ ಆಗಿರುತ್ತದೆ. ಸದರಿ ಕರಾರು ಪತ್ರವನ್ನು ನಿ.ಡಿ.1 ಎಂದು ಗುರುತಿಸಲಾಯಿತು. ನಿ.ಡಿ.1 ದಾಖಲೆಗೆ ನಾನು ಮತ್ತು ಎನ್.ಟಿ. ಮೋಹನ್ ರವರು ಸಹಿ ಮಾಡಿರುತ್ತೇವೆ. ಸಾಕ್ಷಿಯ ಸಹಿಯನ್ನು ನಿ.ಡಿ.1(ಎ) ಎಂದು ಗುರುತಿಸಲಾಯಿತು. ಎನ್.ಟಿ. ಮೋಹನ್ ರವರು ನನ್ನ ಸಮಕ್ಷಮ ನಿ.ಡಿ.1 ದಾಖಲೆಗೆ ಸಹಿ ಮಾಡಿರುತ್ತಾರೆ. ಸಹಿ ಮಾಡುವ ಸಮಯದಲ್ಲಿ ರವಿ, ಬಾಬು, ಅಪ್ಪಿ, ಸುಶೀಲಾ, ಆನಂದ, ಲಕ್ಷ್ಮೀ ಮತ್ತು ಸುನೀಲ್ ರವರು ಹಾಜರಿದ್ದರು. ಈಗ ನನಗೆ ತೋರಿದ ದಾಖಲೆಯು ವಳಗೇರಹಳ್ಳಿ ಭೂತನಾಥೇಶ್ವರಸ್ವಾಮಿ ದೇವಸ್ಥಾನದಿಂದ ನನಗೆ ಎನ್.ಟಿ. ಮೋಹನ್ ರವರು ನೀಡಿರುವ ನೋಟೀಸು ಆಗಿರುತ್ತದೆ. ಸದರಿ ನೋಟೀಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಡಿ.2 ಎಂದು ಗುರುತಿಸಲಾಯಿತು. ನಿ.ಡಿ.2 ರಲ್ಲಿ ಇರುವ ಸಹಿ ಎನ್.ಟಿ. ಮೋಹನ್ ರವರ ಸಹಿ ಆಗಿರುತ್ತದೆ. ಎನ್.ಟಿ. ಮೋಹನ್ ರವರು ನನಗೆ ಕೆಲಸದ ಆಳುಗಳನ್ನು ಸರಬರಾಜು ಮಾಡಿದ ಬಗ್ಗೆ ಬಾಬ್ತು ಚೀಟಿಯನ್ನು ಹಾಜರು ಮಾಡಿದ್ದು ಸದರಿ ಚೀಟಿಯನ್ನು ದೂರುದಾರರ ವಕೀಲರ ತಕರಾರಿಗೆ ಒಳಪಟ್ಟು

ನಿ.ಡಿ.3 ಎಂದು ಗುರುತಿಸಲಾಯಿತು. ನಿ.ಡಿ.3 ದಾಖಲೆಗೆ ಎನ್.ಟಿ. ಮೋಹನ್ ರವರು ಕನ್ನಡದಲ್ಲಿ ಸಹಿ ಮಾಡಿ ನೀಡಿರುತ್ತಾರೆ. ನಾನು ಸದರಿ ಚೀಟಿಗೆ ಸಹಿ ಮಾಡಿರುತ್ತೇನೆ. ನಾನು ಮತ್ತು ಎನ್.ಟಿ. ಮೋಹನ್ ರವರ ತೋಟಕ್ಕೆ ಜನ ಬಿಟ್ಟಿರುವ ಬಗ್ಗೆ ಮಾಡಿರುವ ಬರವಣಿಗೆಯಲ್ಲಿ ಮಾಡಿಕೊಂಡಿದ್ದು ಸದರಿ ಚೀಟಿಯನ್ನು ದೂರುದಾರರ ವಕೀಲರ ತಕರಾರಿಗೆ ಒಳಪಟ್ಟು ನಿ.ಡಿ.4 ಎಂದು ಗುರುತಿಸಲಾಯಿತು. ನಿ.ಡಿ.4 ದಾಖಲೆಗೆ ನಾನು ಮತ್ತು ಎನ್.ಟಿ. ಮೋಹನ್ ರವರು ಸಹಿ ಮಾಡಿರುತ್ತೇವೆ. ನಾನು ಎನ್.ಟಿ. ಮೋಹನ್ ರವರ ಎಸ್ಟೇಟಿಗೆ ಕೆಲಸಕ್ಕೆ ಆಳುಗಳನ್ನು ಬಿಟ್ಟ ಬಗ್ಗೆ ಹಣ ಪಾವತಿಯಾದ ಬಗ್ಗೆ ರಾಜಿ ಚೀಟಿಯನ್ನು ಹಾಜರು ಮಾಡಿದ್ದು ದೂರುದಾರರ ವಕೀಲರ ತಕರಾರಿಗೆ ಒಳಪಟ್ಟು ನಿ.ಡಿ.5 ಎಂದು ಗುರುತಿಸಲಾಯಿತು. ಬಾಬು ಮತ್ತು ಅಪ್ಪಿ ಮತ್ತು ಎನ್.ಟಿ. ಮೋಹನ್ ರವರ ರಾಜಿ ಚೀಟಿಯನ್ನು ಹಾಜರು ಮಾಡಿದ್ದು ದೂರುದಾರರ ವಕೀಲರ ತಕರಾರಿಗೆ ಒಳಪಟ್ಟು ನಿ.ಡಿ.6 ಎಂದು ಗುರುತಿಸಲಾಯಿತು. ಆದುದರಿಂದ ನನಗೆ ನ್ಯಾಯ ಒದಗಿಸಿಕೊಡಬೇಕಾಗಿ ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ – ಆರೋಪಿತನ ಪರವಾಗಿ</u>**

5. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿನಾಂಕಃ 20.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ – ಆರೋಪಿತನ ಪರವಾಗಿ**

6. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ
ಮಾ